**ಕೊಂಕಣ ರೈಲ್ವೆಗಾಗಿ ಭೂಮಿ ಕಳೆದುಕೊಂಡವರಿಗೆ ಉದ್ಯೋಗ**

**459 (1733)ಶ್ರೀ ಆರ್.ಎ.ದೇಶಪಾಂಡೆ (ಹಳಿಯಾಳ)**

ಕಂದಾಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಕೊಂಕಣ ರೈಲ್ವೆ ಯೋಜನೆಯ ಸಲುವಾಗಿ ರಾಜ್ಯದಲ್ಲಿ ಎಷ್ಟು ಎಕರೆಗಳ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುವುದು. ಈ ಪೈಕಿ ಇದುವರೆವಿಗೂ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಇದಕ್ಕಾಗಿ ನೀಡಿರುವ ಪರಿಹಾರ ಎಷ್ಟು? (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು);

ಆ) ಕೊಂಕಣ ರೈಲ್ವೆಯಡಿಯಲ್ಲಿ ಭೂಮಿ ಕಳೆದುಕೊಂಡ ಕುಟುಂಬದ ಪೈಕಿ ಒಬ್ಬರಿಗೆ ರೈಲ್ವೆಯಲ್ಲಿ ಉದ್ಯೋಗ ಕೊಡುವಂತೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಿದೆಯೇ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):-

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 1113 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು. ಇಲ್ಲಿಯವರೆಗೆ ಯಾವ ಭೂಮಿಯನ್ನು ವಶಪಡಿಸಿಕೊಂಡಿಲ್ಲ. ಹಾಗೂ ಇಲ್ಲಿಯವರೆಗೆ 26 ಹಳ್ಳಿಗಳಲ್ಲಿ ಜಮೀನಿಗೆ ಶೇಕಡಾ 80 ರಂತೆ ರೂ 40 ಲಕ್ಷಗಳನ್ನು ನೀಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು1406.73 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುವುದು. ಅದರಲ್ಲಿ ಈಗಾಗಲೇ 1028.33 ಎಕರೆ ಜಮೀನನ್ನು ಸ್ವಾಧೀನ ಪಡೆದು ರೂ 1253.84 ಲಕ್ಷ ರೂಗಳ ಪರಿಹಾರವನ್ನು ನೀಡಿದೆ.

ಆ) ಪರಿಗಣಿಸುವುದಾಗಿ ಸಂಬಂಧಪಟ್ಟವರು ತಿಳಿಸಿದ್ದಾರೆ.

**ಗ್ರಾಮ ಲೆಕ್ಕಿಗರ ನೇಮಕಾತಿ.**

**460 (2139)ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗಾ)**

ಕಂದಾಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಜ್ಯದಲ್ಲಿ ಎಷ್ಟು ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇವೆ ; (ಜಿಲ್ಲಾವಾರು ವಿವರ ನೀಡುವುದು);

ಆ) ಗ್ರಾಮಲೆಕ್ಕಿಗರನ್ನು ಸರ್ಕಾರ ಭರ್ತಿ ಮಾಡುವುದೆ ;

ಇ) ಹಾಗಿದ್ದಲ್ಲಿ, ಯಾವಾಗ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) 2034, ಜಿಲ್ಲಾವಾರು ವಿವರ ಈ ಕೆಳಗಿನಂತಿದೆ:

| | | |
|---|---|---|
| 1 | ಬೆಂಗಳೂರು (ನ) | 5 |
| 2 | ಬೆಂಗಳೂರು (ಗ್ರಾ) | 82 |
| 3 | ಕೋಲಾರ | 124 |
| 4 | ಶಿವಮೊಗ್ಗ | 18 |
| 5 | ಚಿತ್ರದುರ್ಗ | 96 |
| 6 | ತುಮಕೂರು | 173 |
| 7 | ಮೈಸೂರು | 125 |